## PART – I

## ಭಾಷೆ – I

## ಕನ್ನಡ

**ಸೂಚನೆ :** ಈ ಕೆಳಗಿನ ಗದ್ಯಭಾಗವನ್ನು ಓದಿ **1** ರಿಂದ **8** ಪ್ರಶ್ನೆಗಳಿಗೆ ಉತ್ತರಿಸಿ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯ ರಚನೆಗೆ ಪ್ರಾರಂಭಿಸಿದರು. ೧೯೧೦-೧೧ ರ ಸುಮಾರಿನಲ್ಲಿ 'ರಂಗನ ಮದುವೆ' ಎಂಬ ಮೊದಲ ಸಣ್ಣಕಥೆಯನ್ನು ಬರೆದರು. 'ಶ್ರೀನಿವಾಸ' ಎಂಬುದು ಅವರ ಕಾವ್ಯನಾಮ. ಅವರ ಹುಟ್ಟೂರು 'ಮಾಸ್ತಿ' ಕಾವ್ಯನಾಮದಂತೆಯೇ ಜನಪ್ರಿಯವಾಗಿದೆ. ೧೯೨೦ ರಲ್ಲಿ 'ಕೆಲವು ಸಣ್ಣಕಥೆಗಳು' ಎಂಬ ಪ್ರಥಮ ಪುಸ್ತಕ ಪ್ರಕಟವಾಯಿತು. ಇದು ಮಾಸ್ತಿಯವರ ಮೊದಲ ಪುಸ್ತಕವಷ್ಟೇ ಅಲ್ಲ, ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟವಾದ ಮೊದಲ ಪುಸ್ತಕವೂ ಹೌದು. ಮಾಸ್ತಿಯವರ ಸುಮಾರು ೬೦ ಕಥೆಗಳು ೧೪ ಸಂಪುಟಗಳಲ್ಲಿ ಪ್ರಕಟವಾಗಿವೆ. ಅವರು ಕನ್ನಡದ ಮೊದಲ ಕಥೆಗಾರರಲ್ಲ. ಆದರೆ ಅವರಷ್ಟು ಉತ್ತಮ ಕಥೆಗಳನ್ನು ಕನ್ನಡದಲ್ಲಿ ಬರೆದವರು ವಿರಳ. ಕಥೆಗಳಿಗೂ ಮಾಸ್ತಿಯವರಿಗೂ ಅವಿನಾ ಸಂಬಂಧ. ಕನ್ನಡ ಕಥಾಬ್ರಹ್ಮ, ಸಣ್ಣಕಥೆಗಳ ಪಿತಾಮಹ, ಕಥೆಗಾರರ ಅಣ್ಣ ಎಂಬ ಹೇಳಿಕೆಗಳು ಇದಕ್ಕೆ ಸಾಕ್ಷಿ. ಅವರ ಕಥೆಗಳಲ್ಲಿ ಕಥಾಸಾಹಿತ್ಯದ ಅತ್ಯುತ್ತಮ ಅಂಶಗಳಿವೆ. ನಿಜಗಲ್ಲಿನ ರಾಣಿ, ಒಂದು ಹಳೆಯ ಕಥೆ, ಕಾಮನ ಹಬ್ಬದ ಒಂದು ಕಥೆ, ಮೊಸರಿನ ಮಂಗಮ್ಮ, ಜೋಗ್ಯೋರ ಅಂಜಪ್ಪನ ಕೋಳಿ ಕಥೆ, ವೆಂಕಟಶಾಮಿಯ ಪ್ರಣಯ, ಕಲ್ಮಾಡಿಯ ಕೋಣ ಮೊದಲಾದವು ಶ್ರೇಷ್ಠ ಕಥೆಗಳಾಗಿವೆ. ಮಾಸ್ತಿಯವರ ಸಣ್ಣಕಥೆಗಳ ಭಾಷೆ, ನಿರೂಪಣೆ, ಶೈಲಿ ಸರಳ. ಜೀವನದ ಅನುಭವ ನಿಚ್ಚಳ. ಕಥೆಯ ನಿರೂಪಣೆಗೆ ಅವರದೇ ಆದ ವಿಧಾನವಿದೆ. ಸಂಗೀತಗಾರನೊಬ್ಬನ ಜೀವನವನ್ನು ಆಧರಿಸಿರುವ 'ಸುಬ್ಬಣ್ಣ' ಎಂಬ ನೀಳ್ಗತೆ ಪ್ರಪಂಚದ ಅತ್ಯುತ್ತಮ ಕಥೆಗಳ ಸಾಲಿಗೆ ಸೇರುವಂಥದು. ಇದು ಇಂಗ್ಲಿಷ್, ತಮಿಳು, ತೆಲುಗು, ಮಲಯಾಳಂ, ಮರಾಠಿ, ಜರ್ಮನ್ ಭಾಷೆಗಳಿಗೂ ಅನುವಾದವಾಗಿದೆ. ಕುರುಡರಿಗಾಗಿ ಬ್ರೈಲ್ ಆವೃತ್ತಿಯೂ ಸಿದ್ಧವಾಗಿದೆ ; ಹಲವು ಪುನರ್ಮುದ್ರಣ ಕಂಡಿರುವ ಜನಪ್ರಿಯ ಗ್ರಂಥವಾಗಿದೆ.

ಮಾಸ್ತಿಯವರ ಕಥೆಗಳ ವಸ್ತು, ಪಾತ್ರ, ಘಟನೆ, ಅನುಭವ, ವಿನ್ಯಾಸಗಳ ಕ್ಷೇತ್ರ ವಿಶಾಲವಾಗಿದೆ ; ವಿವಿಧ ಮುಖಗಳಿಂದ ಕೂಡಿದೆ. ಅವರ ಕಥಾ ನಿರೂಪಣೆ ಅನುಕರಣೀಯವಾದುದು. ಅವರಿಗೆ ಕಥಾ ನಿರೂಪಣೆ ಮುಖ್ಯ, ಘಟನೆಯಲ್ಲ. ಮನುಷ್ಯ ಸ್ವಭಾವ ಮುಖ್ಯ; ತಂತ್ರವಲ್ಲ. ೧೯೬೮ ರಲ್ಲಿ ಮಾಸ್ತಿಯವರ 'ಸಣ್ಣಕಥೆ'ಗಳು (ಸಣ್ಣಕಥೆಗಳು ೧೨-೧೩ ರ ಸಂಯುಕ್ತ ಸಂಪುಟ) ಗ್ರಂಥಕ್ಕೆ ದೆಹಲಿ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆಯಿತು. ಆ ಸಂದರ್ಭದಲ್ಲಿ ಮೈಸೂರಿನಲ್ಲಿ ಸಾರ್ವಜನಿಕರು ಅವರನ್ನು ಸನ್ಮಾನಿಸಿದರು. 'ಸಣ್ಣಕಥೆಗಳು' ಎರಡನೇ ಸಂಪುಟ 'ಗುರುದಕ್ಷಿಣೆ' ಎಂಬ ಹೆಸರಿನಲ್ಲಿ ತಮಿಳು ಭಾಷೆಗೆ ಭಾಷಾಂತರವಾಗಿದೆ.

1. ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಮೊದಲ ಸಣ್ಣಕಥೆ

(1) ಸುಬ್ಬಣ್ಣ (2) ಮೊಸರಿನ ಮಂಗಮ್ಮ

(3) ರಂಗನ ಮದುವೆ (4) ನಿಜಗಲ್ಲಿನ ರಾಣಿ

2. ಮಾಸ್ತಿ ವೆಂಕಟೇಶ ಅಯ್ಯಂಗಾರರ ಕಾವ್ಯನಾಮ

(1) ಮಾಸ್ತಿ (2) ಶ್ರೀನಿವಾಸ

(3) ಕನ್ನಡ ಕಥಾ ಬ್ರಹ್ಮ (4) ಶ್ರೀರಂಗ

3. ಮಾಸ್ತಿಯವರು ಬರೆದ ಸುಬ್ಬಣ್ಣ ನೀಳ್ಗತೆಯು ಹೊಂದಿರುವ ಕಥಾವಿಷಯ

(1) ವಿಜ್ಞಾನಿಯ ಬವಣೆ (2) ಸಂಗೀತಗಾರನ ಜೀವನ

(3) ಆಟಗಾರನ ಬದುಕು (4) ಬರಹಗಾರನ ಸಾಧನೆ

4. ಮಾಸ್ತಿಯವರು ಬರೆದ ಗುರುದಕ್ಷಿಣೆ ಭಾಷಾಂತರವಾಗಿರುವುದು

(1) ಹಿಂದಿ ಭಾಷೆಗೆ (2) ತಮಿಳು ಭಾಷೆಗೆ

(3) ತೆಲುಗು ಭಾಷೆಗೆ (4) ಗುಜರಾತಿ ಭಾಷೆಗೆ

5. ಸಾರ್ವಜನಿಕರು ಮಾಸ್ತಿಯವರನ್ನು ಸನ್ಮಾನಿಸಿದ್ದು ಅವರಿಗೆ ಈ ಪ್ರಶಸ್ತಿ ದೊರೆತಾಗ

(1) ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2) ಗೌರವ ಡಿ.ಲಿಟ್ ಪ್ರಶಸ್ತಿ

(3) ಪಂಪ ಪ್ರಶಸ್ತಿ (4) ದೆಹಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

6. ಮಾಸ್ತಿಯವರ 'ಕೆಲವು ಸಣ್ಣ ಕಥೆಗಳು' ಪ್ರಕಟವಾದ ವರ್ಷ

(1) 1968 (2) 1920

(3) 1911 (4) 1910

7. ಮಾಸ್ತಿಯವರಿಗೆ ಈ ಹೇಳಿಕೆ ಅನ್ವಯವಾಗುವುದಿಲ್ಲ

(1) ಚುಟುಕು ಬ್ರಹ್ಮ (2) ಕನ್ನಡ ಕಥಾ ಬ್ರಹ್ಮ

(3) ಸಣ್ಣ ಕಥೆಗಳ ಪಿತಾಮಹ (4) ಕಥೆಗಾರರ ಅಣ್ಣ

8. 'ಅತ್ಯುತ್ತಮ' ಪದದಲ್ಲಿರುವ ಸಂಧಿ

(1) ಯಣ್ (2) ಜಶ್ತ್ವ

(3) ಆದೇಶ (4) ಗುಣ



Scanned with OKEN Scanner

ಸೂಚನೆ : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9 ರಿಂದ 15 ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಚಿತ್ತದಿಳೆಯಾಳದಲಿ ಗತ ಅನುಭವದ ಬಿತ್ತಗಳ
ಮೊಳೆಸಿ ನೆನಪಿನ ಫಸಲ ತೂಗಿದೆ ಮಳೆ ;
ಮತ್ತೆ ಬರಬಾರದೇ ಹಿಗ್ಗೆರೆದ ಹಳಗಾಲ
ಎಂದು ಹಪಹಪಿಸುವ ತೆರದಿ ಕಾಡಿದೆ ಮಳೆ.

೨

ಒಂದೊಂದೆ ದೃಶ್ಯವನು ನಿಲಿಸಿ ಕಣ್ಣಿನ ಮುಂದೆ
ಸಂದ ಆನಂದವನು ಮರುಕಳಿಸಿದೆ ಮಳೆ ;
ಮುಂಬಾಳು ಪಯಣವನು ಸಹ್ಯಗೊಳಿಸಲಿಕೆಂದೆ
ಸಿಹಿ ನೆನಪ ಬುತ್ತಿಯನು ಅಣಿಗೊಳಿಸಿದೆ ಮಳೆ.

೩

ಯಾವ ಯಾವುದೊ ರೂಪ, ಸುಸ್ವರಾಲಾಪ, ಸವಿ
ಸರಸ ಸಲ್ಲಾಪಗಳ ಮೈ ತಳೆಸಿದೆ ಮಳೆ ;
ಜೀವ ಜೀವಾಳವನೆ ಕಲಕಿ ಸುಮಧುರ ನೋವಿ–
ನಿಂದ ಭಾವಾವೇಗ ಬೆಳೆಸಿದೆ ಮಳೆ.

೪

ಎದೆ ಬಿಗಿದ ಬಂಧಗಳ, ಮುಗಿದ ಸಂಬಂಧಗಳ
ಮರೆತೆನೆಂದರು ಮರೆಯಗೊಡದಿದೆ ಮಳೆ ;
ಬೆಸೆದೊಲವ ಅಂಚುಗಳ ಕಿತ್ತೆಸೆದ ಸಂಚುಗಳ
ಬೇಡವೆಂದರು ಮೆರೆಸಿ ಜಡಿದಿದೆ ಮಳೆ.

೫

ಸುಖದುಃಖ ಲಾಳಿಗಳ ಬಾಳ ಮಗ್ಗದೊಳಿಳಿಸಿ
ಹಳಹಳಿಕೆ ಅರಿವೆಯನು ನೆಯ್ದಿದೆ ಮಳೆ ;
ಎಂದೊ ಭೂಗತಿಸಿರುವ ಕೆಳೆಯ ಪಳೆಯುಳಿಕೆಯನು
ಸಪ್ರಾಣಿಸುತ, ಒಂದೇ ಸಮ ಹೊಯ್ದಿದೆ ಮಳೆ.

9. ನೆನಪಿನ ಬೆಳೆಯನ್ನು ತೂಗಿರುವುದು

(1) ಇಳೆ
(2) ಮಳೆ
(3) ಕೊಳೆ
(4) ಹೊಳೆ

10. ಕವಿ ಹೇಳುವಂತೆ ಮರುಕಳಿಸಿರುವುದು

(1) ಆನಂದ
(2) ಸ್ನೇಹ
(3) ನೆನಪು
(4) ಸಂಬಂಧ

11. ಮತ್ತೆ ಬರಬಾರದೇ

(1) ಹಿಗ್ಗೆರೆದ ಚಳಿಗಾಲ
(2) ಹಿಗ್ಗೆರೆದ ಮಳೆಗಾಲ
(3) ಹಿಗ್ಗೆರೆದ ಸುಡುಗಾಲ
(4) ಹಿಗ್ಗೆರೆದ ಹಳಗಾಲ

12. ಮಳೆಯು ಮರೆಯಗೊಡದಿರುವುದು

(1) ನೋವನ್ನು
(2) ನಲಿವನ್ನು
(3) ಬಂಧ ಸಂಬಂಧಗಳನ್ನು
(4) ನಗುವನ್ನು

13. ಮಳೆಯು ಜೀವ ಜೀವಾಳವನು

(1) ತೋಯಿಸಿದೆ
(2) ಕಲಕಿದೆ
(3) ಅಲುಗಾಡಿಸಿದೆ
(4) ಮರೆಸಿದೆ

14. ಸುಖ ದುಃಖ ಎನ್ನುವುದು

(1) ನುಡಿಗಟ್ಟು
(2) ದ್ವಿರುಕ್ತಿ
(3) ಜೋಡುನುಡಿ
(4) ಅನುಕರಣಾವ್ಯಯ

15. ಪಯಣ ಪದದ ತತ್ಸಮ ರೂಪ

(1) ಪ್ರಯಾಣ
(2) ಪ್ರಯಾಸ
(3) ಯಾತ್ರೆ
(4) ಪ್ರೇರಣ



Scanned with OKEN Scanner

16. ಅನುನಾಸಿಕವಲ್ಲದ ಅಕ್ಷರ

(1) ತ (2) ನ

(3) ಮ (4) ಜ

17. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಗಳ ಸಂಖ್ಯೆ

(1) 25 (2) 09

(3) 13 (4) 34

18. 'ಮೆಲ್ವಾತು' ಪದದಲ್ಲಿರುವ ಸಂಧಿ

(1) ಲೋಪ ಸಂಧಿ (2) ಅನುನಾಸಿಕ ಸಂಧಿ

(3) ಜಶ್ತ್ವ ಸಂಧಿ (4) ಆದೇಶ ಸಂಧಿ

19. ವೃದ್ಧಿ ಸಂಧಿಗೆ ಉದಾಹರಣೆ

(1) ಜ್ಞಾನೇಶ್ವರ (2) ಅಷ್ಟೈಶ್ವರ್ಯ

(3) ಪಯಶ್ಶಯನ (4) ಮಹೇಶ್ವರಿ

20. "ಶಬರಿಯು ಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕೆ ಕಾದಿದ್ದಳು."
ವಾಕ್ಯದಲ್ಲಿ ಷಷ್ಠೀ ವಿಭಕ್ತಿ ಪ್ರತ್ಯಯ ಹೊಂದಿರುವ ಪದ

(1) ಶಬರಿಯು (2) ಧ್ಯಾನದಲ್ಲಿ

(3) ರಾಮನ (4) ದರ್ಶನಕ್ಕೆ

21. ಭಾಷೆಯಲ್ಲಿ ಧ್ವನಿಯನ್ನು ಮಾಪನ ಮಾಡುವ ಘಟಕ

(1) ವರ್ಣ (2) ಧ್ವನಿಮಾ

(3) ಸ್ವರ (4) ಆಕೃತಿಮಾ

22. ಮಾತೃಭಾಷಾ ಕಲಿಕೆಯು

(1) ಅನುಭವ ವಿಕಾಸಕ್ಕೆ ನೆರವಾಗದು

(2) ಪರಸ್ಪರ ವಿಚಾರ ವಿನಿಮಯವನ್ನು ಕಠಿಣಗೊಳಿಸುತ್ತದೆ

(3) ಸೃಜನಾತ್ಮಕವಾಗಿ ಪ್ರತಿಭೆಯನ್ನು ವಿಕಾಸಗೊಳಿಸುತ್ತದೆ

(4) ಇತರ ಭಾಷಾ ಕಲಿಕೆಗೆ ತೊಡಕಾಗುತ್ತದೆ

23. ಉಚ್ಚಾರಣೆಯ ದೋಷಕ್ಕೆ ಕಾರಣವಲ್ಲ

(1) ಶ್ವಾಸೋಚ್ಛ್ವಾಸದ ತೊಂದರೆ (2) ಕಾಗುಣಿತದ ಅಸಮರ್ಪಕ ಕಲಿಕೆ

(3) ಹಲ್ಲಿನ ರಚನೆಯ ದೋಷ (4) ನಿರಂತರವಾಗಿ ವಾಕ್ಯವನ್ನು ಉಚ್ಚರಿಸುವ ಅಭ್ಯಾಸ



Scanned with OKEN Scanner

24. ಭಾಷಾ ಪ್ರಯೋಗಾಲಯದಲ್ಲಿ ಪ್ರಧಾನ ನಿಯಂತ್ರಕ ಮತ್ತು ಮೇಲ್ವಿಚಾರಕ

(1) ವಿದ್ಯಾರ್ಥಿ (2) ಮುಖ್ಯಾಧ್ಯಾಪಕ

(3) ಭಾಷಾ ಶಿಕ್ಷಕ (4) ಪೋಷಕ

25. ಬೋಧನೋಪಕರಣಗಳಲ್ಲಿ ಶ್ರಾವ್ಯ ಉಪಕರಣ

(1) ರೇಡಿಯೋ ಧ್ವನಿ ಸುರುಳಿ (2) ಚಿತ್ರಗಳು, ಕರಿಹಲಗೆ

(3) ಪಠ್ಯಪುಸ್ತಕ ನಿಘಂಟು (4) ವಾರ್ತಾಪತ್ರಿಕೆ, ಚಿತ್ರಫಲಕ

26. ಉಪನ್ಯಾಸ ವಿಧಾನದ ಉದ್ದೇಶಗಳಿಗೆ ಸಂಬಂಧಿಸಿದಂತೆ ಸೂಕ್ತವಲ್ಲದ ಹೇಳಿಕೆ

(1) ವರ್ಗದ ಮೇಲೆ ನಿಯಂತ್ರಣ ಹೊಂದುವುದು

(2) ಉತ್ತಮ ಸಂವಹನ ಕೌಶಲ್ಯ ಒದಗಿಸುವುದು

(3) ಸಂಕ್ಷಿಪ್ತ ಮಾಹಿತಿಯನ್ನು ಮಾತ್ರ ನೀಡುವುದು

(4) ಪ್ರಮುಖ ವಿಚಾರಗಳನ್ನು ವಿವರಿಸುವುದು

27. ಲಿಖಿತ ಪರೀಕ್ಷೆಯ ನ್ಯೂನತೆಯಾಗಿದೆ

(1) ಲಿಖಿತ ಉತ್ತರಗಳನ್ನು ಮೌಲ್ಯಮಾಪನ ಮಾಡುವುದು

(2) ನಕಲು ಮಾಡುವ ಸಾಧ್ಯತೆ ಇದೆ

(3) ದೀರ್ಘ ಕಾಲದವರೆಗೆ ಸಂಗ್ರಹಿಸಲು ಸಾಧ್ಯ

(4) ಒಂದು ಅಥವಾ ಹೆಚ್ಚಿನ ಉದ್ದೇಶವನ್ನು ಮೌಲ್ಯಮಾಪನ ಮಾಡಬಹುದು

28. ವಸ್ತುನಿಷ್ಠ ಪರೀಕ್ಷೆಗಳ ವಿಧವಲ್ಲ

(1) ಕಿರು ಉತ್ತರ ನೀಡುವ ಪರೀಕ್ಷೆ (2) ಹೊಂದಿಸಿ ಬರೆಯುವ ಪರೀಕ್ಷೆ

(3) ವಿವರಿಸಿ ಬರೆಯುವ ಪರೀಕ್ಷೆ (4) ಒಂದು ವಾಕ್ಯ, ಶಬ್ದದಲ್ಲಿ ಉತ್ತರ ನೀಡುವ ಪರೀಕ್ಷೆ

29. ಪ್ರತಿಭಾವಂತ ವಿದ್ಯಾರ್ಥಿಯ ಗುಣಲಕ್ಷಣವಲ್ಲ

(1) ವಯಸ್ಸಿಗೆ ಮೀರಿದ ಅವಧಾನ ಇರುತ್ತದೆ

(2) ಸಾಧನೆಯ ಹಂಬಲವಿರುತ್ತದೆ

(3) ಇತರ ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಅಧಿಕ ತಿಳುವಳಿಕೆ ಇರುತ್ತದೆ

(4) ಸ್ಮರಣ ಶಕ್ತಿ ಕಡಿಮೆ ಇರುತ್ತದೆ

30. CCE ಇದರ ವಿಸ್ತೃತ ರೂಪ

(1) ನಿರಂತರ ಸಮಗ್ರ ಮೌಲ್ಯಮಾಪನ (2) ನಿರಂತರ ವ್ಯಾಪಕ ಮೌಲ್ಯಮಾಪನ

(3) ನಿರಂತರ ಸಾಧನೆಯ ಮೌಲ್ಯಮಾಪನ (4) ನಿರಂತರ ಸಂಕ್ಷಿಪ್ತ ಮೌಲ್ಯಮಾಪನ



Scanned with OKEN Scanner

# PART – II
# LANGUAGE – II
# ENGLISH

**Directions :** Read the given passage and answer the questions (Q. Nos. **31 – 38**) that follow by selecting the most appropriate option :

In the Kingdom of Fools, both the king and the minister were idiots. They didn't want to run things like other kings, so they decided to change night into day and day into night. They ordered that everyone should be awake at night, till their fields and run their businesses only after dark, and all go to bed as soon as the sun came up. Anyone who disobeyed would be punished with death. The people did as they were told for fear of death. The king and the minister were delighted at the success of their project.

One day a guru and his disciple arrived in the city. It was a beautiful city, it was broad daylight, but there was no one about. Everyone was asleep; not a mouse stirred. Even the cattle had been taught to sleep by day. The two strangers were amazed by what they saw around them and wandered around town till evening, when suddenly the whole town woke up and went about its nightly business.

The two men were hungry. Now that the shops were open, they went to buy some groceries. To their astonishment, they found that everything cost the same, a single *duddu* – whether they bought a measure of rice or a bunch of bananas, it cost a *duddu*.

31. In the passage, the real fools are
    (1) King and the queen.
    (2) King and the soldiers.
    (3) King and the farmers.
    (4) King and the minister.

32. The king and minister decided to change
    (1) night into day and day into night.
    (2) night into Sunday and Sunday into night.
    (3) night into moon day and moon day into night.
    (4) night into holiday and holiday into night.



Scanned with OKEN Scanner

33. They ordered that everyone should be awake

(1) at morning.

(2) at evening.

(3) at night.

(4) at noon

34. They all went to bed as soon as

(1) the moon came up.

(2) the sun came up.

(3) the stars came up.

(4) the birds came up.

35. The punishment for disobeying the King's order was

(1) Gifts

(2) Rewards

(3) Death

(4) Land

36. The correct group of words synonymous with 'beautiful' is

(1) pretty, dull, handsome, lovely

(2) pretty, handsome, attractive, lovely

(3) pretty, attractive, foolish, lovely

(4) pretty, lovely, handsome, jealous

37. The two strangers, guru and his disciple were amazed to see

(1) Everyone was asleep in the day and started their business at night.

(2) Everyone was asleep in the night and started with their business.

(3) Everyone was asleep in the midday and started with their business.

(4) Everyone was asleep in the morning and started with their business.

38. The word in the passage which means 'Feeling of very great surprise' is

(1) beautiful

(2) success

(3) astonishment

(4) delighted



Scanned with OKEN Scanner

**Directions :** Read the given poem and answer the questions (Q. Nos. 39 – 45) that follow by selecting the most appropriate option :

Day by day I float my paper boats one by one down the running stream.
In big black letters I write my name on them and the name of the village where I live.
I hope that someone in some strange land will find them and know who I am.
I load my little boats with shiuli flower from our garden, and hope that these blooms of the dawn will be carried safely to land in the night.
I launch my paper boats and look up into the sky and see the little clouds setting thee white bulging sails.
I know not what playmate of mine in the sky sends them down the air to race with my boats !
When night comes I bury my face in my arms and dream that my paper boats float on and on under the midnight stars.
The fairies of sleep are sailing in them, and the lading ins their baskets full of dreams.

39. The place where paper boats used to float one by one was
(1) In the pond.
(2) On the mountains.
(3) On the river bank.
(4) Down the running stream

40. The reason for writing the name and name of the village in big black letters was
(1) Someone in strange land will find and know who the child was.
(2) Someone in strange land will find and call them.
(3) Someone in strange land will find and sail back.
(4) Someone in strange land will find and send back the boat.

41. Day by day I float my paper boats one by one down the running stream. ( )
In big black letters I write my name on them and the name of the village where I live. ( )
I hope that someone in some strange land will find them and know who I am. ( )
I load my little boats with shiuli flower from our garden, and hope that these blooms of the dawn will be carried safely to land in the night. ( )
The rhyme scheme of this poem is
(1) AA BB
(2) AB AB
(3) AB CD
(4) AA BC

42. The synonyms of the word, 'Strange' are
(1) Unusual, famous, unfamiliar
(2) Unusual, unfamiliar, strong
(3) Unusual, surprising, loving
(4) Unusual, surprising, unfamiliar

43. 'The fairies of sleep are sailing in them.'
The correct figure of speech in the line is
(1) Simile
(2) Metaphor
(3) Personification
(4) Alliteration

44. The special gift sent by the poet was
(1) Shiuli flower
(2) Jasmin flower
(3) Sunflower
(4) Lilly flower

45. The child dreams that fairies of sleep
(1) Send the blooms of its garden
(2) See the little clouds
(3) Carry dreams in paper boats
(4) Launch paper boats



Scanned with OKEN Scanner

46. When did India become free

The above sentence should end with

(1) a comma (,)

(2) a full stop (.)

(3) a question mark (?)

(4) an exclamatory mark (!)

47. The word 'wheel' collocates with

(1) bus

(2) car

(3) chair

(4) table

48. They are good players.

The correct question tag to be added to the given sentence is

(1) Are they ?

(2) Aren't they ?

(3) Were they ?

(4) Weren't they ?

49. The new knife was sharp but the old one was __________.

(1) deep

(2) soft

(3) blunt

(4) hard

50. The correct suffix to be added to the word 'kind' to make it a noun is

(1) ly

(2) ness

(3) ing

(4) ful



Scanned with OKEN Scanner

51. Suggestopedia was an approach advocated by
(1) John Dewy
(2) H.G. Widdowson
(3) C.J. Dodson
(4) Dr. Georgi Lozanov

52. The first stage of preparation of unit test is
(1) Content analysis
(2) Preparing blueprint
(3) Writing test items
(4) Unit analysis

53. The disadvantage of Bilingual method is
(1) It discourage use of Mother tongue.
(2) It does not emphasis fluency.
(3) It does not save time.
(4) May degenerate into pure translation method.

54. Role play is a technique used in classes to teach
(1) writing skill
(2) reading skill
(3) reference skill
(4) speaking skill

55. Objectives of Teaching English includes
(1) Knowledge, Understanding, Application and Skill
(2) Knowledge, Comprehension, Expression and Appreciation
(3) Knowledge, Analysis, Synthesis and Create
(4) Recall, Recognise and Identify

56. Learners good at graphic organising, photography, map-drawing and using mind maps have
(1) Interpersonal intelligence
(2) Logical intelligence
(3) Spatial intelligence
(4) Intrapersonal intelligence

57. The words 'hear' and 'near' represent a speech sound
(1) /eI/
(2) /ɔI/
(3) /əʊ/
(4) /Iə/

58. According to Richards & Rodgers, the following best describes the "approach" in their model of language teaching methodology.
(1) The actual class-room techniques used by the teacher.
(2) The syllabus and sequencing of activities for a course.
(3) The underlying theory or beliefs about language and language learning.
(4) Text book and other physical materials used in a class.

59. The teaching method emphasises physical movement in response to commands in the target language is –
(1) Grammar-Translation method
(2) Total physical response
(3) Suggestopedia
(4) Audiolingual method

60. One of the characteristic of the Audiolingual method is –
(1) heavy translation between the learners' L-1 and the target language.
(2) grammar taught inductively through discover-learning.
(3) frequent pattern drills and repetition.
(4) learners decide the syllabus and goals, themselves.


Scanned with OKEN Scanner

## KANNADA MEDIUM

## PART – III

# ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

61. ಮಕ್ಕಳಿಗೆ ಪಂಚತಂತ್ರ, ಗೀತೋಪನಿಷತ್ತು, ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಕಲಿಸುವುದು ಇದರ ಭಾಗವಾಗಿದೆ.

    (1) ಮಾನಸಿಕ ವಿಕಾಸ
    (2) ಸಾಮಾಜಿಕ ವಿಕಾಸ
    (3) ನೈತಿಕ ವಿಕಾಸ
    (4) ಸಂವೇಗಾತ್ಮಕ ವಿಕಾಸ

62. IQ ಎಂಬುದು

    (1) ಆಂತರಿಕ ಭಾಗಲಬ್ಧ
    (2) ವೈಯಕ್ತಿಕ ಗುಣಮಟ್ಟ
    (3) ಬುದ್ಧಿ ಭಾಗಲಬ್ಧ
    (4) ಬೌದ್ಧಿಕ ಪರಿಮಾಣ

63. ಘನ ಆಹಾರ ಸೇವನೆ, ನಡೆದಾಡುವ ಮತ್ತು ಮಾತನಾಡುವ ಕಲಿಕೆಯು ಈ ವಿಕಾಸದ ಕ್ರಿಯೆಯಾಗಿದೆ.

    (1) ಆರಂಭಿಕ ಬಾಲ್ಯಾವಧಿ
    (2) ಉತ್ತರ ಬಾಲ್ಯಾವಧಿ
    (3) ತಾರುಣ್ಯಾವಸ್ಥೆ
    (4) ವಯಸ್ಕಾವಧಿ

64. ಪರಿಕಲ್ಪನೆಯ ರಚನೆಯು ಇದರ ಅಂಶವಾಗಿದೆ.

    (1) ದೈಹಿಕ ವಿಕಾಸ
    (2) ಬೌದ್ಧಿಕ ವಿಕಾಸ
    (3) ಸಂವೇಗಾತ್ಮಕ ವಿಕಾಸ
    (4) ನೈತಿಕ ವಿಕಾಸ

65. ವ್ಯಕ್ತಿತ್ವದ ಮನೋವಿಶ್ಲೇಷಣೆ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದವರು

    (1) ಆಲ್‌ಪೋರ್ಟ್
    (2) ಐಸೆಂಕ್
    (3) ಕೆಟೆಲ್
    (4) ಸಿಗ್ಮಂಡ್ ಫ್ರಾಯ್ಡ್

66. ಈ ಹಂತದಲ್ಲಿ ವ್ಯಕ್ತಿಗಳು ಹಗಲುಗನಸನ್ನು ಕಾಣುತ್ತಾರೆ.

    (1) ವಯಸ್ಕಾವಧಿ
    (2) ವೃದ್ಧಾಪ್ಯ
    (3) ಬಾಲ್ಯಾವಸ್ಥೆ
    (4) ತಾರುಣ್ಯಾವಸ್ಥೆ



Scanned with OKEN Scanner

67. ಮಾನವರ ಲೈಂಗಿಕ ವಿಕಾಸವು ಇಲ್ಲಿ ಉತ್ತುಂಗದಲ್ಲಿರುತ್ತದೆ.

(1) ಬಾಲ್ಯಾವಸ್ಥೆ
(2) ವಯಸ್ಕಾವಧಿ
(3) ತಾರುಣ್ಯಾವಸ್ಥೆ
(4) ವೃದ್ಧಾಪ್ಯ

68. ಉತ್ತಮ ಪಾಠ ಯೋಜನೆಯ ಪ್ರಮುಖ ಗುಣಲಕ್ಷಣ ಇದಾಗಿದೆ.

(1) ಶಿಕ್ಷಕ ಕೇಂದ್ರಿತ
(2) ವಿದ್ಯಾರ್ಥಿ ಕೇಂದ್ರಿತ
(3) ಪರೀಕ್ಷಾ ಕೇಂದ್ರಿತ
(4) ಪಠ್ಯವಸ್ತು ಕೇಂದ್ರಿತ

69. ಒಬ್ಬ ವ್ಯಕ್ತಿ ಕಡಿಮೆ ಮಾತನಾಡುವವನಾಗಿದ್ದರೆ ಅವನನ್ನು ಹೀಗೆ ಕರೆಯುತ್ತೇವೆ.

(1) ಅಂತರ್‌ಮುಖಿ
(2) ಸಾಮಾನ್ಯ ವ್ಯಕ್ತಿ
(3) ಬಹಿರ್‌ಮುಖಿ
(4) ಉಭಯಮುಖಿ

70. ಈ ಹಂತದಲ್ಲಿ "ಸಮ ವಯಸ್ಕರ ಗುಂಪು ನಿಜವಾದ ಪ್ರಪಂಚ"

(1) ಬಾಲ್ಯಾವಸ್ಥೆ
(2) ತಾರುಣ್ಯಾವಸ್ಥೆ
(3) ವಯಸ್ಕಾವಧಿ
(4) ವೃದ್ಧಾಪ್ಯ

71. ಉಪಯೋಗಿಸುವ ಮತ್ತು ಉಪಯೋಗಿಸದ ನಿಯಮಗಳು ಈ ಕೆಳಗಿನ ಕಲಿಕೆಯ ನಿಯಮದ ವಿಧಗಳಾಗಿವೆ.

(1) ಸಿದ್ಧತಾ ನಿಯಮ
(2) ಪರಿಣಾಮ ನಿಯಮ
(3) ಅಭ್ಯಾಸ ನಿಯಮ
(4) ಪ್ರೇರಣಾ ನಿಯಮ

72. ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರದ ಅಂಶ

(1) ಅನುವಂಶೀಯತೆ
(2) ಬುದ್ಧಿಶಕ್ತಿ
(3) ಕುಟುಂಬ
(4) ರಕ್ತದ ಗುಂಪು


Scanned with OKEN Scanner

73. ಇದು ಕಲಿಕೆಯ ವಲಯ ಅಲ್ಲ

(1) ಜ್ಞಾನಾತ್ಮಕ ವಲಯ
(2) ಪ್ರೇರಣಾ ವಲಯ
(3) ಮನೋಗತಿ ವಲಯ
(4) ಭಾವನಾತ್ಮಕ ವಲಯ

74. ಬ್ರೈಲ್ ಲಿಪಿಯನ್ನು ಈ ವಿದ್ಯಾರ್ಥಿಗಳಿಗೆ ಬಳಸಲಾಗುತ್ತದೆ.

(1) ದೃಷ್ಟಿ ಸವಾಲುಗಳುಳ್ಳ ಮಕ್ಕಳು
(2) ಶ್ರವಣ ಸವಾಲುಗಳುಳ್ಳ ಮಕ್ಕಳು
(3) ದೈಹಿಕ ವಿಕಲತೆಯುಳ್ಳ ಮಕ್ಕಳು
(4) ಸಾಮಾನ್ಯ ಮಕ್ಕಳು

75. ಈಜುವುದು ಮತ್ತು ಕುದುರೆ ಸವಾರಿಯು ಇದರ ಉದಾಹರಣೆಗಳಾಗಿವೆ.

(1) ಅನುಕ್ರಮದ ಕಲಿಕೆ
(2) ಪರಿಕಲ್ಪನಾ ಕಲಿಕೆ
(3) ಸ್ನಾಯು(ಮೋಟರ್) ಕಲಿಕೆ
(4) ಜೋಡಿ ಸಂಯೋಜನಾ ಕಲಿಕೆ

76. ಮಕ್ಕಳು ವರ್ಣಮಾಲೆಯನ್ನು ಕಲಿತಾಗ ಅವರಲ್ಲಿ ಉಂಟಾಗುವ ಕಲಿಕಾ ವಿಧವು

(1) ಸರಣಿ ಕಲಿಕೆ
(2) ಸಮಸ್ಯಾ – ಪರಿಹಾರ ಕಲಿಕೆ
(3) S-R ಕಲಿಕೆ
(4) ಅನುಕ್ರಮ ಕಲಿಕೆ

77. ವಿದ್ಯಾರ್ಥಿಯು ಪದಗಳಲ್ಲಿನ ಅಕ್ಷರಗಳನ್ನು ಬೆರೆಸಿಕೊಳ್ಳುವುದರಿಂದ ಓದುವಾಗ ಕಷ್ಟವಾಗುತ್ತದೆ. ಇದನ್ನು ಒಳಗೊಂಡಿರುವುದು –

(1) ಡಿಸ್‌ಕ್ಯಾಲ್ಕುಲಿಯ
(2) ಡಿಸ್‌ಲೆಕ್ಸಿಯಾ
(3) ಡಿಸ್‌ಗ್ರಾಫಿಯ
(4) ಡಿಸ್‌ಪ್ರಾಕ್ಸಿಯ

78. ಕಲಿಕೆಯ ಬಗ್ಗೆ ಸರಿಯಲ್ಲದ ಹೇಳಿಕೆ –

(1) ಇದು ಒಂದು ಸನ್ನಿವೇಶದಿಂದ ಮತ್ತೊಂದಕ್ಕೆ ವರ್ಗಾವಣೆಯಾಗಬಲ್ಲುದು.
(2) ಇದು ಉದ್ದೇಶಪೂರಿತ ಮತ್ತು ಗುರಿ ನಿರ್ದೇಶಿತವಾದದ್ದು.
(3) ಇದು ಶೈಕ್ಷಣಿಕ ಅನುಭವದಿಂದ ಮಾತ್ರ ಉಂಟಾಗುತ್ತದೆ.
(4) ಇದು ನಿರಂತರ ಪ್ರಕ್ರಿಯೆಯಾಗಿದೆ.


Scanned with OKEN Scanner

79. "ಹುಡುಗರು ಧೈರ್ಯಶಾಲಿಗಳು ಮತ್ತು ಹುಡುಗಿಯರು ನಾಚಿಕೆ ಸ್ವಭಾವದವರು" ಎಂದು ಹೇಳುವುದು ಇದನ್ನು ವ್ಯಕ್ತಪಡಿಸುತ್ತದೆ.

(1) ಲಿಂಗತ್ವ ಏಕರೂಪಕ
(2) ಲಿಂಗತ್ವ ಸಮಾನತೆ
(3) ಲಿಂಗತ್ವ ತಟಸ್ಥತೆ
(4) ಲಿಂಗತ್ವ ಸೂಕ್ಷ್ಮತೆ

80. ಶಿಕ್ಷಕರು ಈ ಲಕ್ಷಣದ ಸಹಾಯದಿಂದ ಉತ್ತಮ ಸ್ಮೃತಿಯನ್ನು ಹೊಂದಿದ ವಿದ್ಯಾರ್ಥಿಗಳನ್ನುಗುರುತಿಸಬಹುದು.

(1) ಭಂಗಿ
(2) ಹಾವಭಾವ
(3) ಕ್ಷಿಪ್ರತೆ
(4) ಭಾಷೆ

81. ಇಲ್ಲಿ ಹೊಸ ಅನುಭವದ ಸ್ಮೃತಿಯು ಹಳೆಯ ಅನುಭವಗಳನ್ನು ಅಡ್ಡಿಪಡಿಸುತ್ತದೆ.

(1) ಹಿಮ್ಮುಖ ಅವರೋಧ
(2) ಮುಮ್ಮುಖ ಅವರೋಧ
(3) ಪ್ರೇರಿತ ವಿಸ್ಮೃತಿ
(4) ಬಳಸದೆ ಉಂಟಾದ ವಿಸ್ಮೃತಿ

82. ಬ್ಲೂಮ್‌ರವರ ಪರಿಷ್ಕೃತ ವರ್ಗೀಕರಣದಲ್ಲಿ 'ಸಂಶ್ಲೇಷಣೆ' ಯನ್ನು ಈ ರೀತಿ ಹೆಸರಿಸಲಾಗಿದೆ.

(1) ಜ್ಞಾಪಿಸಿಕೊಳ್ಳುವಿಕೆ
(2) ಸೃಷ್ಟಿಸುವಿಕೆ
(3) ಅರ್ಥಮಾಡಿಕೊಳ್ಳುವಿಕೆ
(4) ಮೌಲ್ಯಮಾಪನ ಮಾಡುವಿಕೆ

83. ದೇಶಿಕ/ಅಂತರ ಗ್ರಹಿಕೆ ಮತ್ತು ಕಲ್ಪನೆಯು ಇದಕ್ಕೆ ಸಂಬಂಧಿಸಿದೆ.

(1) ಯಾಂತ್ರಿಕ ಅಭಿಕ್ಷಮತೆ
(2) ಪಾಂಡಿತ್ಯಾಭಿಕ್ಷಮತೆ
(3) ವೈಜ್ಞಾನಿಕ ಅಭಿಕ್ಷಮತೆ
(4) ಕಾರಕೂನೀಯ ಅಭಿಕ್ಷಮತೆ

84. ವಿದ್ಯಾರ್ಥಿಗಳ ಕಲಿಕಾ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಬಳಸುವ ಮೌಲ್ಯಮಾಪನ

(1) ಸಂಕಲನಾತ್ಮಕ ಮೌಲ್ಯಮಾಪನ
(2) ರೂಪಣಾತ್ಮಕ ಮೌಲ್ಯಮಾಪನ
(3) ನೈದಾನಿಕ ಮೌಲ್ಯಮಾಪನ
(4) ಪೂರ್ವಸೂಚಕ ಮೌಲ್ಯಮಾಪನ



Scanned with OKEN Scanner

85. ಶಿಕ್ಷಕರು ತಮ್ಮ ಬೋಧನಾ ತಂತ್ರಗಳನ್ನು ಮಾರ್ಪಾಡು ಮಾಡಲು ಸಹಾಯ ಮಾಡುವ ಮೌಲ್ಯಮಾಪನ ವಿಧಾನ ಇದಾಗಿದೆ.

(1) ಸಂಕಲನಾತ್ಮಕ ಮೌಲ್ಯಮಾಪನ
(2) ನೈದಾನಿಕ ಮೌಲ್ಯಮಾಪನ
(3) ರೂಪಣಾತ್ಮಕ ಮೌಲ್ಯಮಾಪನ
(4) ಮಾನಕ ಆಧಾರಿತ ಮೌಲ್ಯಮಾಪನ

86. ಈ ಕೆಳಗಿನವುಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳ ಗುಣಲಕ್ಷಣವಲ್ಲದ್ದು

(1) ಬಹು ವೇಗವಾಗಿ ಮತ್ತು ಸುಲಭವಾಗಿ ಕಲಿಯುತ್ತಾರೆ.
(2) ಅರ್ಥೈಸಿಕೊಳ್ಳುವಿಕೆಯಲ್ಲಿ ವೇಗ.
(3) ಅವರ ಸ್ನೇಹಿತರಿಗೆ ಹೋಲಿಸಿದರೆ ಹೆಚ್ಚು ವಿಷಯಗಳನ್ನು ತಿಳಿದಿರುತ್ತಾರೆ.
(4) ಅತಿಕಡಿಮೆ ಅವಧಿಗೆ ಅವಧಾನವನ್ನು ಹೊಂದಿರುತ್ತಾರೆ.

87. ಕಲಿಕಾರ್ಥಿಗಳಲ್ಲಿನ ಏಕ ಅಥವಾ ಬಹು ಲಕ್ಷಣಗಳಲ್ಲಿನ ವ್ಯತ್ಯಾಸ ಅಥವಾ ವಿಷಯಾಂತರವೇ

(1) ವ್ಯಕ್ತಿ ಭಿನ್ನತೆಗಳು
(2) ಜನಾಂಗೀಯ ಭಿನ್ನತೆಗಳು
(3) ಪ್ರಾದೇಶಿಕ ಭಿನ್ನತೆಗಳು
(4) ಕಲಿಕಾರ್ಥಿ ಭಿನ್ನತೆಗಳು

88. ತೊಗಲು ಗೊಂಬೆ ಮತ್ತು ಪಾತ್ರಾಭಿನಯ ಈ ಬೋಧನೋಪಕರಣಕ್ಕೆ ಉದಾಹರಣೆ.

(1) ಪ್ರದರ್ಶಿತ ಬೋಧನೋಪಕರಣ
(2) ಚಟುವಟಿಕಾ ಆಧಾರಿತ ಉಪಕರಣ
(3) ಶ್ರವಣ ಉಪಕರಣ
(4) ಮುದ್ರಿತ ಉಪಕರಣ

89. 10 ವರ್ಷ ವಯಸ್ಸಿನ ವ್ಯಕ್ತಿಯ ಮಾನಸಿಕ ವಯಸ್ಸು 8 ವರ್ಷಗಳಾದರೆ ಆತನ ಬುದ್ಧಿಲಬ್ಧವು

(1) 70
(2) 80
(3) 100
(4) 90

90. ಒಂದು ಸನ್ನಿವೇಶ ಅಥವಾ ಕಾರ್ಯವನ್ನು ನಿರ್ವಹಿಸುವ ವ್ಯಕ್ತಿಯ ಸಾಮರ್ಥ್ಯವೇ

(1) ಆಸಕ್ತಿ
(2) ಉದ್ದೇಶ
(3) ಬುದ್ಧಿಶಕ್ತಿ
(4) ಅನ್ವೇಷಣೆ


Scanned with OKEN Scanner

## ENGLISH MEDIUM

## PART – III

# CHILD DEVELOPMENT AND PEDAGOGY

61. Teaching stories from Panchatantra, Gitopanishath, Ramayan and Mahabharatha to children is a part of
(1) Mental development
(2) Social development
(3) Moral development
(4) Emotional development

62. IQ stands for
(1) Internal Quotient
(2) Individual Quality
(3) Intelligence Quotient
(4) Intellectual Quantity

63. Learning to take solid food, to walk and to talk is the developmental task of
(1) Early childhood
(2) Later childhood
(3) Adolescence
(4) Adulthood

64. Concept formation is an important aspect of
(1) Physical development
(2) Intellectual development
(3) Emotional development
(4) Moral development

65. Psychoanalysis theory of personality was developed by
(1) Allport
(2) Eyesenk
(3) Cattel
(4) Sigmund Freud

66. In this stage day dreaming can be seen
(1) Adulthood
(2) Old age
(3) Childhood
(4) Adolescence

67. The sexual development reaches its peak in humans at
(1) Childhood
(2) Adulthood
(3) Adolescence
(4) Old age



Scanned with OKEN Scanner

68. The important characteristic of a good lesson plan is

(1) Teacher Centered
(2) Student Centered
(3) Exam Centered
(4) Syllabus Centered

69. If a person speaks less, then he is called

(1) Introvert
(2) Normal
(3) Extrovert
(4) Ambivert

70. "Peer group is the real world" at this stage

(1) Childhood
(2) Adolescence
(3) Adulthood
(4) Old age

71. Law of use and disuse are the types of

(1) Law of readiness
(2) Law of effect
(3) Law of exercise
(4) Law of motivation

72. Factor not affecting mental health is

(1) Heredity
(2) Intelligence
(3) Family
(4) Blood group

73. This is not a domain of learning

(1) Cognitive domain
(2) Motivation domain
(3) Psycho-motor domain
(4) Affective domain

74. Braille script is used for

(1) Visually challenged children
(2) Hearing challenged children
(3) Physical handicapped children
(4) Normal children

75. Swimming and horse riding are the examples of

(1) Serial learning
(2) Concept learning
(3) Motor learning
(4) Paired associate learning



Scanned with OKEN Scanner

76. The type of learning that takes place when children learn alphabet is

(1) Chain learning
(2) Problem-solving learning
(3) S-R learning
(4) Serial learning

77. A student may mix up letters within words and finds difficulty in reading is having

(1) Dyscalculia
(2) Dyslexia
(3) Dysgraphia
(4) Dyspraxia

78. The incorrect statement regarding learning is

(1) It is transferable from one situation to another.
(2) It is purposive and goal directed.
(3) It takes place only by academic experience.
(4) It is a continuous process.

79. 'Saying boys are brave and girls are shy' shows

(1) Gender stereotype
(2) Gender equality
(3) Gender neutrality
(4) Gender sensitivity

80. With the help of this sign, teacher can identify students with good memory

(1) Postures
(2) Gestures
(3) Rapidity
(4) Language

81. Here memories of recent experience interferes with past memories

(1) Retroactive inhibition
(2) Proactive inhibition
(3) Motivated forgetting
(4) Decay through disuse

82. In Revised Bloom Taxonomy 'Synthesis' was renamed as

(1) Remembering
(2) Creating
(3) Understanding
(4) Evaluating



Scanned with OKEN Scanner

83. Spatial perception and imagination is related to

(1) Mechanical aptitude
(2) Scholastic aptitude
(3) Scientific aptitude
(4) Clerical aptitude

84. Evaluation used to understand the learning problems of children is

(1) Summative evaluation
(2) Formative evaluation
(3) Diagnostic evaluation
(4) Prognostic evaluation

85. The evaluation helps teachers to modify their teaching strategies is

(1) Summative evaluation
(2) Diagnostic evaluation
(3) Formative evaluation
(4) Norm referenced evaluation

86. One of the following is not a characteristic of gifted children :

(1) learns rapidly and easily.
(2) quick in understanding.
(3) knows about many things as compared to his friends.
(4) span of attention is very poor.

87. Variation or deviations among the learners in regard to single or many characteristics is

(1) Individual differences
(2) Racial differences
(3) Regional differences
(4) Learner differences

88. Puppets and role play are examples for

(1) Display aids
(2) Activity based aids
(3) Audio aids
(4) Printed materials

89. Mental age of a 10 years old person is 8 years, then his IQ is

(1) 70
(2) 80
(3) 100
(4) 90

90. The ability of handling a situation or accomplishing any task is

(1) Interest
(2) Intention
(3) Intelligence
(4) Invention




Scanned with OKEN Scanner

# KANNADA MEDIUM

## PART – IV

## ಗಣಿತ



91. ಆಯತ ಘನದಲ್ಲಿ ಆಯತಾಕಾರದ ಮುಖಗಳ ಸಂಖ್ಯೆ

(1) 6
(2) 8
(3) 4
(4) 12

92. $28x^4y^5$ ಮತ್ತು $49x^5y^4$ ರ ಮಹತ್ತಮ ಸಾಮಾನ್ಯ ಅಪವರ್ತನವು

(1) $14x^4y^4$
(2) $7x^4y^4$
(3) $196x^5y^5$
(4) $49x^5y^5$

93. ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆಯು

(1) ಒಂದು ತ್ರಿಭುಜವು ಎರಡು ಲಂಬಕೋನಗಳನ್ನು ಹೊಂದಿರುತ್ತದೆ.
(2) ಒಂದು ತ್ರಿಭುಜವು ಎರಡು ಅಧಿಕ ಕೋನಗಳನ್ನು ಹೊಂದಿರುತ್ತದೆ.
(3) ಒಂದು ತ್ರಿಭುಜವು ಎರಡು ಲಘುಕೋನಗಳನ್ನು ಹೊಂದಿರುತ್ತದೆ.
(4) ತ್ರಿಭುಜದ ಒಂದು ಬಾಹ್ಯಕೋನವು ಅದರ ಅಂತರಾಭಿಮುಖ ಕೋನಗಳ ಮೊತ್ತಕ್ಕಿಂತ ಕಡಿಮೆಯಿರುತ್ತದೆ.

94. $\left(1\frac{3}{10}\right)^3$ ರ ಬೆಲೆಯು

(1) $1\frac{27}{1000}$
(2) $2\frac{27}{1000}$
(3) $2\frac{197}{1000}$
(4) $1\frac{197}{1000}$

95. ಕೆಳಗಿನವುಗಳಲ್ಲಿ ಒಂದು ರೇಖಾತ್ಮಕ ಸಮೀಕರಣವು

(1) $2x^2 + 3x + 4 = 0$
(2) $2x - 3 = 5x + 6$
(3) $x = \frac{1}{4x}$
(4) $2(2y + 3) = 6 + 4y$

96. 150 ಮತ್ತು ಅದಕ್ಕೆ ಸಮೀಪದ ಪೂರ್ಣ ವರ್ಗ ಸಂಖ್ಯೆಯ ನಡುವಿನ ವ್ಯತ್ಯಾಸವು

(1) 7
(2) 10
(3) 19
(4) 6

97. ಒಂದು ವೃತ್ತಕ್ಕೆ ಒಂದು ಬಾಹ್ಯ ಬಿಂದುವಿನಿಂದ ಎಳೆಯಬಹುದಾದ ಗರಿಷ್ಠ ಸ್ಪರ್ಶಕಗಳ ಸಂಖ್ಯೆ

(1) 1
(2) 0
(3) 2
(4) 3

**Space For Rough Work**

Scanned with OKEN Scanner

98. $4y^2 - 3y^3 + 9y^7$ ಬಹುಪದೋಕ್ತಿಯ ಡಿಗ್ರಿಯು

(1) 3
(2) 7
(3) 9
(4) 2

99. $\frac{7}{19}$ ರ ಸಮನಾದ ಭಾಗಲಬ್ಧ ಸಂಖ್ಯೆಯು

(1) $\frac{17}{119}$
(2) $\frac{14}{57}$
(3) $\frac{21}{57}$
(4) $\frac{21}{38}$


100. $(-3) \times (-6) \times (-2) \times (-1)$ ರ ಬೆಲೆಯು

(1) –18
(2) 36
(3) –36
(4) 24

101. (2, –5) ಬಿಂದುವು ಕಾರ್ಟೀಸಿಯನ್ ಸಮತಲದ ಈ ಚತುರ್ಥಕದಲ್ಲಿರುತ್ತದೆ.

(1) I ಚತುರ್ಥಕ
(2) II ಚತುರ್ಥಕ
(3) III ಚತುರ್ಥಕ
(4) IV ಚತುರ್ಥಕ

102. ಚಿತ್ರದಲ್ಲಿ $\angle AGH = 50^\circ$ ಆಗಿದೆ, AB || CD ಆಗುವಂತೆ ಮಾಡಲು $\angle DHF$ ನ ಅಳತೆಯು





(1) 50°
(2) 110°
(3) 130°
(4) 120°

Space For Rough Work

Scanned with OKEN Scanner

103. ಕೊಟ್ಟಿರುವ ಚಿತ್ರದಲ್ಲಿ ABCD ಒಂದು ವಜ್ರಾಕೃತಿಯಾಗಿದೆ. $AB = 2x + 3$ ಮತ್ತು $AD = 3x - 2$ ಆದಾಗ $x$ ನ ಬೆಲೆಯು




(1) 4
(2) 3
(3) 6
(4) 5


104. ತ್ರಿಜ್ಯವು 28 ಸೆಂ.ಮೀ. ಆಗಿರುವ ಒಂದು ವೃತ್ತದ ತ್ರಿಜ್ಯಾಂತರ ಖಂಡದಲ್ಲಿನ ಕೇಂದ್ರದ ಕೋನವು 45° ಆದರೆ ಆ ತ್ರಿಜ್ಯಾಂತರ ಖಂಡವು ಹೊಂದಿರುವ ಕಂಸದ ಉದ್ದವು $\left(\pi = \frac{22}{7}\right.$ : ಎಂದು ಉಪಯೋಗಿಸಿ$\left.\right)$

(1) 11 cm
(2) 22 cm
(3) 33 cm
(4) 44 cm

105. 135° ಅಳತೆಯ ಕೋನದ ಸರಳಪೂರಕ ಕೋನ ಹಾಗೂ 45° ಅಳತೆಯ ಕೋನದ ಲಂಬಕೋನಪೂರಕದ ಮೊತ್ತವು ಸಾಂಖ್ಯಿಕವಾಗಿ ಈ ರೀತಿಯ ಕೋನದ ಅಳತೆಯಾಗಿದೆ.

(1) ಒಂದು ಲಘು ಕೋನ
(2) ಒಂದು ವಿಶಾಲ ಕೋನ
(3) ಒಂದು ಸರಳಾಧಿಕ ಕೋನ
(4) ಒಂದು ಲಂಬ ಕೋನ

106. ಚಿತ್ರದಲ್ಲಿ $AC = BD$ ಆಗಿದೆ, AB ಮತ್ತು CD ಗಳ ನಡುವಿನ ಸಂಬಂಧವನ್ನು ಸೂಚಿಸುವ ಸರಿಯಾದ ಹೇಳಿಕೆಯು




(1) $AB = 2 \cdot CD$
(2) $AB = CD$
(3) $AB = \frac{1}{2} \cdot CD$
(4) $\frac{1}{2} AB = CD$

107. $0.\overline{54}$ ರ $\frac{p}{q}$ ರೂಪವು

(1) $\frac{29}{50}$
(2) $\frac{6}{11}$
(3) $\frac{4}{7}$
(4) $\frac{5}{3}$



Scanned with OKEN Scanner


108. ಒಂದು ಸಂಖ್ಯೆಯ $\frac{1}{3}$ ಕ್ಕೆ ಅದರ $\frac{1}{5}$ ನ್ನು ಕೂಡಿದರೆ 32 ಬರುತ್ತದೆ. ಹಾಗಾದರೆ ಆ ಸಂಖ್ಯೆಯು

(1) 64
(2) 60
(3) 62
(4) 54

109. 21 cm ತ್ರಿಜ್ಯವಿರುವ ಅರ್ಧಗೋಳದ ವಕ್ರ ಮೇಲ್ಮೈ ವಿಸ್ತೀರ್ಣವು $\left(\pi = \frac{22}{7}\right.$ : ಎಂದು ಉಪಯೋಗಿಸಿ$\left.\right)$

(1) 2772 $cm^2$
(2) 3772 $cm^2$
(3) 1772 $cm^2$
(4) 4772 $cm^2$

110. ಚಿತ್ರದಲ್ಲಿ $\angle ABD = 125°$ ಮತ್ತು $\angle ACE = 130°$ ಆದರೆ $\angle A$ ನ ಅಳತೆಯು




(1) 50°
(2) 55°
(3) 65°
(4) 75°

111. 4 ಕೆಂಪು ಪೆನ್ನುಗಳು ಮತ್ತು 5 ಕಪ್ಪು ಪೆನ್ನುಗಳಿರುವ ಒಂದು ಚೀಲದಿಂದ ಯಾದೃಚ್ಛಿಕವಾಗಿ ಒಂದು ಪೆನ್ನನ್ನು ಹೊರ ತೆಗೆಯಲಾಗಿದೆ. ಆ ಪೆನ್ನು ಕೆಂಪು ಆಗದಿರುವ ಸಂಭವನೀಯತೆಯು

(1) $\frac{5}{9}$
(2) $\frac{4}{9}$
(3) $\frac{4}{5}$
(4) $\frac{9}{5}$

112. ಒಂದು ಘನಾಕೃತಿಯ ಮುಖಗಳ ಸಂಖ್ಯೆ ಮತ್ತು ಅಂಚುಗಳ ಸಂಖ್ಯೆಗಳು ಕ್ರಮವಾಗಿ 6 ಮತ್ತು 12 ಆಗಿದೆ. ಆ ಘನಾಕೃತಿಯಲ್ಲಿ ಶೃಂಗಗಳ ಸಂಖ್ಯೆಯು

(1) 8
(2) 16
(3) 20
(4) 18

113. 4 ಸೆಂ.ಮೀ. ಉದ್ದದ ಬಾಹುವಿನ ಒಂದು ಸಮಬಾಹು ತ್ರಿಭುಜವನ್ನು ತಂತಿಯ ತುಂಡು ಬಳಸಿ ತಯಾರಿಸಲಾಗಿದೆ. ತಂತಿಯನ್ನು ನೇರಗೊಳಿಸಿ ನಂತರ ಚೌಕಾಕಾರಕ್ಕೆ ಬದಲಿಸಿದಾಗ, ಚೌಕದ ಪ್ರತಿ ಬಾಹುವಿನ ಉದ್ದವು

(1) 4 ಸೆಂ.ಮೀ.
(2) 7 ಸೆಂ.ಮೀ.
(3) 2 ಸೆಂ.ಮೀ.
(4) 3 ಸೆಂ.ಮೀ.

**Space For Rough Work**

Scanned with OKEN Scanner

114. $\Delta ABC$ ಯಲ್ಲಿ ಕೋನ C ಲಂಬಕೋನವಾಗಿದೆ. AC = 5 ಸೆಂ.ಮೀ. ಮತ್ತು BC = 12 ಸೆಂ.ಮೀ. ಆದರೆ $\Delta ABC$ ಯ ಸುತ್ತಳತೆಯು

(1) 17 ಸೆಂ.ಮೀ. (2) 20 ಸೆಂ.ಮೀ.

(3) 27 ಸೆಂ.ಮೀ. (4) 30 ಸೆಂ.ಮೀ.

115. ಒಂದು ಸಂಖ್ಯೆಯ $\frac{4}{5}$ ರಷ್ಟು ಅದೇ ಸಂಖ್ಯೆಯ $\frac{3}{4}$ ರಷ್ಟಕ್ಕಿಂತ 4 ಹೆಚ್ಚು ಆದರೆ ಆ ಸಂಖ್ಯೆಯು

(1) 12 (2) 64

(3) 80 (4) 102

116. 14 ಸೆಂ.ಮೀ. ಸುತ್ತಳತೆ ಇರುವ ಒಂದು ಆಯತವನ್ನು ರಚಿಸಿ ಎಂದು ವಿದ್ಯಾರ್ಥಿಗಳಿಗೆ ಕೇಳಿದರೆ, ಇದು ಹೊಂದಿರುವ ಪ್ರಶ್ನೆಯ ವಿಧ

(1) ಆವೃತಗೊಂಡಿರುವ ಪ್ರಶ್ನಾ ವಿಧ (2) ವಸ್ತುನಿಷ್ಠ ಪ್ರಶ್ನಾ ವಿಧ

(3) ಜ್ಞಾನಾಧಾರಿತ ಪ್ರಶ್ನಾ ವಿಧ (4) ತೆರೆದ ರೀತಿಯ ಪ್ರಶ್ನಾ ವಿಧ

117. ವಿಚಾರಗಳ ನಡುವಿನ ಸಹಸಂಬಂಧದ ಮೂಲಕ ವಿಷಯಾಂಕವನ್ನು ಅನ್ವೇಷಿಸುವ ಬೋಧನಾ ಪ್ರಕ್ರಿಯೆ

(1) ಪರಿಕಲ್ಪನೆ (2) ಸತ್ಯ ಸಂಗತಿ

(3) ಕಾರ್ಯ ವಿಧಾನ (4) ಊಹಾ ಕಲ್ಪನೆ

118. 'ತಿಳಿದಿರುವ ಕಡೆಯಿಂದ ತಿಳಿಯದಿರುವ' ವಿಷಯದ ಕಡೆಗೆ ಸಾಗುವ ಗಣಿತದ ಬೋಧನಾ ವಿಧಾನ

(1) ನಿಗಮನ ವಿಧಾನ (2) ಸಂಶ್ಲೇಷಣಾ ವಿಧಾನ

(3) ಅನುಗಮನ ವಿಧಾನ (4) ವಿಶ್ಲೇಷಣಾ ವಿಧಾನ

119. 5E ಕಲಿಕಾ ಮಾದರಿ ಬಳಸಿ ಗಣಿತ ಪಾಠವನ್ನು ಅನುಕೂಲಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಅನುಭವವನ್ನು ಹೆಂಚಿಕೊಳ್ಳುವ ಮತ್ತು ಸಂವಹನಿಸುವ ಹಂತ

(1) ತೊಡಗಿಸಿಕೊಳ್ಳುವ ಹಂತ (2) ಅನ್ವೇಶಿಸುವ ಹಂತ

(3) ವಿವರಿಸುವ ಹಂತ (4) ವಿಸ್ತರಿಸುವ ಹಂತ

120. ಪ್ರಾಥಮಿಕ ಹಂತದ ಗಣಿತ ಕಲಿಕೆಯಲ್ಲಿ ಸೇರಿಸಿರದ ಸಂಗತಿ

(1) ವಿಷಯಾಂಶ (2) ಬೋಧನಾ ವಿಧಾನ

(3) ಮೌಲ್ಯಮಾಪನ (4) ಭಾಷಾ ಬೆಳವಣಿಗೆ

**Space For Rough Work**

Scanned with OKEN Scanner

## KANNADA MEDIUM

## PART – V

## ಪರಿಸರ ಅಧ್ಯಯನ

121. ಶುಷ್ಕ ವಿದ್ಯುತ್ ಕೋಶಗಳಲ್ಲಿ ವಿದ್ಯುತ್ ಉತ್ಪಾದಿಸುವ ಕ್ರಿಯೆ

(1) ಜೈವಿಕ ಕ್ರಿಯೆ
(2) ಅಣು (ಬೈಜಿಕ) ಕ್ರಿಯೆ
(3) ಭೌತಿಕ ಕ್ರಿಯೆ
(4) ರಾಸಾಯನಿಕ ಕ್ರಿಯೆ

122. ಬಲವು ಇದನ್ನು ಉಂಟು ಮಾಡುವುದಿಲ್ಲ

(1) ವೇಗದಲ್ಲಿ ಬದಲಾವಣೆ
(2) ಗಾತ್ರದಲ್ಲಿ ಬದಲಾವಣೆ
(3) ಆಕಾರದಲ್ಲಿ ಬದಲಾವಣೆ
(4) ಭೌತ ಸ್ಥಿತಿಯಲ್ಲಿ ಬದಲಾವಣೆ


123. ಭೂಮಿಯ ಅತ್ಯಂತ ಹೊರ ಕವಚ


(1) ತೊಗಟೆ
(2) ಮ್ಯಾಂಟಲ್
(3) ಹೊರ ಗರ್ಭ
(4) ಒಳ ಗರ್ಭ


124. ಶಬ್ದದ ಸ್ಥಾಯಿಯು ಇದನ್ನು ಅವಲಂಬಿಸಿದೆ.


(1) ತಾಪ
(2) ತರಂಗದೂರ
(3) ಪಾರ
(4) ಆವೃತ್ತಿ

125. ಬೆಳಕಿನ ಪ್ರತಿಫಲನಕ್ಕೆ ಸಂಬಂಧಿಸಿದಂತೆ ಸರಿಯಾದ ರೇಖಾ ಚಿತ್ರ

(1)



(2)



(3)



(4)


126. 6 ರಷ್ಟು ಪರಿಮಾಣದ ಭೂಕಂಪವು, 4 ರಷ್ಟು ಪರಿಮಾಣದ ಭೂಕಂಪನಕ್ಕಿಂತ

(1) 2 ರಷ್ಟು ಹೆಚ್ಚು ವಿನಾಶಕಾರಿ
(2) 10 ರಷ್ಟು ಹೆಚ್ಚು ವಿನಾಶಕಾರಿ
(3) 100 ರಷ್ಟು ಹೆಚ್ಚು ವಿನಾಶಕಾರಿ
(4) 1000 ರಷ್ಟು ಹೆಚ್ಚು ವಿನಾಶಕಾರಿ


127. ಅಣೆಕಟ್ಟುಗಳಲ್ಲಿ ಸಂಗ್ರಹವಾದ ನೀರು ಇದಕ್ಕೆ ಉದಾಹರಣೆ

(1) ಪ್ರಚ್ಛನ್ನ ಶಕ್ತಿ
(2) ಚಲನ ಶಕ್ತಿ
(3) ಸೌರ ಶಕ್ತಿ
(4) ಭರತ ಶಕ್ತಿ

128. ಒತ್ತಡವು ಇದಕ್ಕೆ ಸಮ

(1) ಏಕಮಾನ ವಿಸ್ತೀರ್ಣ/ಬಲ
(2) ಒತ್ತಡ/ಏಕಮಾನ ವಿಸ್ತೀರ್ಣ
(3) ಬಲ × ಏಕಮಾನ ವಿಸ್ತೀರ್ಣ
(4) ಬಲ/ಏಕಮಾನ ವಿಸ್ತೀರ್ಣ

129. ನಾಲ್ಕು ಕಾಂತಗಳನ್ನು ಚೌಕಾಕಾರದಲ್ಲಿ ಜೋಡಿಸಲಾಗಿದೆ. A, B ಮತ್ತು C ಧ್ರುವಗಳು ಕ್ರಮವಾಗಿ




(1) S, N, S
(2) N, S, N
(3) S, S, N
(4) N, N, N.

130. ಹೊಳೆಯುವ ಅಲೋಹ

(1) ಚಿನ್ನ
(2) ಅಯೋಡಿನ್
(3) ಕಾರ್ಬನ್
(4) ಆಕ್ಸಿಜನ್

131. ಗಾಳಿಯಲ್ಲಿನ ನೀರಾವಿಯ ಪ್ರಮಾಣ

(1) ಸಾಂದ್ರತೆ
(2) ವಿಲೀನತೆ
(3) ಆಮ್ಲೀಯತೆ
(4) ಆರ್ದ್ರತೆ

132. ಗಾಳಿಯು ಇದಕ್ಕೆ ಉದಾಹರಣೆ

(1) ಧಾತು

(2) ಸಂಯುಕ್ತ

(3) ನಿಲಂಬನ

(4) ಮಿಶ್ರಣ

133. ಇದನ್ನು ಕಪ್ಪು ಚಿನ್ನ ಎಂದು ಸಾಮಾನ್ಯವಾಗಿ ಕರೆಯುತ್ತಾರೆ

(1) ಪೆಟ್ರೋಲಿಯಂ

(2) CNG

(3) LPG

(4) ಕಲ್ಲಿದ್ದಲು ಅನಿಲ

134. ವಿದ್ಯುತ್ ವಾಹಕ ಪ್ರತ್ಯಾಮ್ಲ

(1) ಕಾಸ್ಟಿಕ್ ಸೋಡಾ

(2) ಪೊಟ್ಯಾಸಿಯಂ ಅಯೋಡೈಡ್

(3) ವಿನೆಗರ್

(4) ಪೊಟ್ಯಾಸಿಯಂ ಕ್ಲೋರೈಡ್

135. ದ್ರವವನ್ನು ಘನಸ್ಥಿತಿಗೆ ಪರಿವರ್ತಿಸುವ ಕ್ರಿಯೆ

(1) ಉತ್ಪತನ

(2) ಘನೀಕರಣ

(3) ದ್ರವಿಸುವಿಕೆ

(4) ಸಾಂದ್ರೀಕರಣ

136. ಅಸಿಟಿಕ್ ಆಮ್ಲವು ಬೇಕಿಂಗ್ ಸೋಡಾದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ

(1) $N_2$

(2) $CO_2$

(3) $H_2$

(4) $O_2$

137. ಇಂಧನ ಕ್ಯಾಲೋರಿ ಮೌಲ್ಯದ ಏರಿಕೆಯ ಸರಿಯಾದ ಅನುಕ್ರಮಣಿಕೆ

(1) ಕಟ್ಟಿಗೆ < ಜೈವಿಕ ಅನಿಲ < LPG < ಪೆಟ್ರೋಲ್ < ಹೈಡ್ರೋಜನ್

(2) ಕಟ್ಟಿಗೆ < ಜೈವಿಕ ಅನಿಲ < ಪೆಟ್ರೋಲ್ < LPG < ಹೈಡ್ರೋಜನ್

(3) ಕಟ್ಟಿಗೆ > ಜೈವಿಕ ಅನಿಲ > ಪೆಟ್ರೋಲ್ > LPG > ಹೈಡ್ರೋಜನ್

(4) ಹೈಡ್ರೋಜನ್ > LPG > ಪೆಟ್ರೋಲ್ < ಜೈವಿಕ ಅನಿಲ > ಕಟ್ಟಿಗೆ

138. ಸಸ್ಯಗಳು ಉಸಿರಾಟಕ್ಕಾಗಿ ಬಳಸುವ ಅನಿಲ

(1) ಕಾರ್ಬನ್ ಡೈ ಆಕ್ಸೈಡ್

(2) ನೈಟ್ರೋಜನ್

(3) ಕಾರ್ಬನ್ ಮೋನಾಕ್ಸೈಡ್

(4) ಆಕ್ಸಿಜನ್



Scanned with OKEN Scanner

139. ದೇಹ ನಿರ್ಮಾಣಕಾರಕ ಆಹಾರ

(1) ಅಕ್ಕಿ

(2) ಬೇಳೆ ಕಾಳುಗಳು

(3) ತುಪ್ಪ

(4) ನೀರು

140. ನವೀಕರಿಸಬಹುದಾದ ಸಂಪನ್ಮೂಲಕ್ಕೆ ಉದಾಹರಣೆ

(1) ಕಲ್ಲಿದ್ದಲು

(2) ನೈಸರ್ಗಿಕ ಅನಿಲ

(3) ಖನಿಜ

(4) ನೀರು

141. "ಕೆಂಪು ದತ್ತಾಂಶ ಪುಸ್ತಕ" ವು ಇವುಗಳ ದತ್ತಾಂಶಗಳನ್ನು ಒಳಗೊಂಡಿದೆ.

(1) ಅಪಾಯಕ್ಕೊಳಗಾದ ಎಲ್ಲಾ ಪ್ರಾಣಿಗಳು.

(2) ಅಪಾಯಕ್ಕೊಳಗಾದ ಎಲ್ಲಾ ಸಸ್ಯಗಳು.

(3) ಅಪಾಯಕ್ಕೊಳಗಾದ ಎಲ್ಲಾ ಪ್ರಾಣಿಗಳು ಮತ್ತು ಸಸ್ಯಗಳು.

(4) ಅಪಾಯಕ್ಕೊಳಗಾದ ಹುಲಿಗಳು.

142. ಮಾನವನ ಜೀರ್ಣಾಂಗ ವ್ಯೂಹದಲ್ಲಿ ಹೈಡ್ರೋಕ್ಲೋರಿಕ್ ಆಮ್ಲ ಇಲ್ಲಿ ಸ್ರವಿಕೆಯಾಗುವುದು

(1) ಅನ್ನನಾಳ

(2) ಸಣ್ಣ ಕರುಳು

(3) ಜಠರ

(4) ದೊಡ್ಡ ಕರುಳು

143. ರೈಜೋಬಿಯಂ ಬ್ಯಾಕ್ಟೀರಿಯಾ ಕಂಡು ಬರುವ ಸಸ್ಯ

(1) ಕಡಲೆ ಗಿಡ

(2) ಬಿದಿರಿನ ಗಿಡ

(3) ತೆಂಗಿನ ಗಿಡ

(4) ರಾಗಿ ಗಿಡ

144. ಲೋಳೆಯಂತಹ ವಸ್ತುವು ವಾಸ್ತವವಾಗಿ ಕಪ್ಪೆಯ ಮೊಟ್ಟೆಗಳ ಸಮೂಹವಾಗಿದೆ. ಇದನ್ನು ಹೀಗೆ ಕರೆಯಲಾಗುತ್ತದೆ.

(1) ಪ್ಯೂಪ

(2) ಭ್ರೂಣ

(3) ಸ್ಪಾನ್

(4) ಲಾರ್ವ


Scanned with OKEN Scanner

145. ಕೃಷಿ ಪದ್ಧತಿಯಲ್ಲಿ ಪಾಲಿಸುವ ಸರಿಯಾದ ಅನುಕ್ರಮಣಿಕೆ :

(1) ಮಣ್ಣನ್ನು ಹದಗೊಳಿಸುವಿಕೆ → ಬಿತ್ತನೆ → ಸಾವಯವ ಗೊಬ್ಬರಗಳು ಮತ್ತು ರಸಗೊಬ್ಬರಗಳನ್ನು ಸೇರಿಸುವುದು → ನೀರಾವರಿ.

(2) ನೀರಾವರಿ → ಸಾವಯವ ಗೊಬ್ಬರಗಳು ಮತ್ತು ರಸಗೊಬ್ಬರಗಳನ್ನು ಸೇರಿಸುವುದು → ಬಿತ್ತನೆ → ಮಣ್ಣನ್ನು ಹದಗೊಳಿಸುವಿಕೆ.

(3) ಬಿತ್ತನೆ → ಮಣ್ಣನ್ನು ಹದಗೊಳಿಸುವಿಕೆ → ಸಾವಯವ ಗೊಬ್ಬರಗಳು ಮತ್ತು ರಸಗೊಬ್ಬರಗಳನ್ನು ಸೇರಿಸುವುದು → ನೀರಾವರಿ.

(4) ಸಾವಯವ ಗೊಬ್ಬರಗಳು ಮತ್ತು ರಸಗೊಬ್ಬರಗಳನ್ನು ಸೇರಿಸುವುದು → ನೀರಾವರಿ → ಬಿತ್ತನೆ → ಮಣ್ಣನ್ನು ಹದಗೊಳಿಸುವಿಕೆ.

146. ಒಬ್ಬ ಶಿಕ್ಷಕರು 'ಕೊಳದ ಪರಿಸರ ವ್ಯವಸ್ಥೆ' ಯ ಬಗ್ಗೆ ಅನುಕೂಲಿಸಲು ಯಾವ ಸಂಪನ್ಮೂಲವು ನೇರ ಮತ್ತು ನೈಜ ಅನುಭವವನ್ನು ಪರಿಣಾಮಕಾರಿಯಾಗಿ ಒದಗಿಸುತ್ತದೆ ?

(1) ಪಠ್ಯ ಪುಸ್ತಕದಲ್ಲಿನ ವಿವರವಾದ ಅಧ್ಯಾಯ.

(2) ಒಂದು ಕೊಳವಿರುವ ವರ್ಣಮಯ ಚಿತ್ರಪಟ.

(3) ಸ್ಥಳೀಯವಾಗಿ ಅನುಕೂಲವಾಗಿರುವ ಕೊಳಕ್ಕೆ ಭೇಟಿ ನೀಡುವುದು.

(4) ಶಿಕ್ಷಕರು ಕೊಳದ ಬಗ್ಗೆ ಉಪನ್ಯಾಸ ನೀಡುವುದು.

147. ಪರಿಸರ : ಸಂಯೋಜಿತ : : ಪರಿಸರ ಅಧ್ಯಯನ ಪಠ್ಯವಸ್ತು : ________.

(1) ಸ್ಥಿರತೆ ಹೊಂದಿರುವ ಸ್ವಭಾವ

(2) ವಿಷಯಾಧಾರಿತ ಸ್ವಭಾವ

(3) ಶಿಸ್ತಿನ ಸ್ವಭಾವ

(4) ನಿಷ್ಕ್ರಿಯ ವೀಕ್ಷಕ ಸ್ವಭಾವ

148. ಸಂಪನ್ಮೂಲದ ವಿಧ ಮತ್ತು ಅದಕ್ಕೆ ಪೂರಕವಾದ ಉದಾಹರಣೆಯೊಂದಿಗೆ ಹೊಂದಿಸಿ :

| ಸಂಪನ್ಮೂಲದ ವಿಧ | | ಉದಾಹರಣೆ | |
|---|---|---|---|
| I. | ಸಮುದಾಯ | A. | ವೃತ್ತಪತ್ರಿಕೆಯ ಬರಹದ ತುಣುಕು |
| II. | ಸಂಸ್ಥೆ | B. | ಸ್ಥಳೀಯ ಕುಂಬಾರ |
| III. | ಮಾಧ್ಯಮ | C. | ಶಾಲಾ ತೋಟ |
| IV. | ಪ್ರಕೃತಿ | D. | ಅಂಚೆ ಕಛೇರಿ |

| | I | II | III | IV |
|---|---|---|---|---|
| (1) | A | B | C | D |
| (2) | D | B | A | C |
| (3) | D | B | C | A |
| (4) | B | C | D | A |

149. NCF-2005 ರ ಪ್ರಕಾರ ಪರಿಸರ ಅಧ್ಯಯನ ಕಲಿಕೆಗೆ ಸಂಬಂಧಿಸಿದಂತೆ ಪ್ರಮುಖವಾಗಿ ಪರಿಗಣಿಸಿರುವುದು

(1) ಕಲಿತ ಸಂಗತಿಗಳನ್ನು ನೆನಪಿಸಿಕೊಳ್ಳುವುದು

(2) ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆಯುವುದು

(3) ಸಂಕೀರ್ಣ ಆಲೋಚನಾ ಸಾಮರ್ಥ್ಯದ ಬೆಳವಣಿಗೆ ಮತ್ತು ಅರ್ಥ ಮಾಡಿಕೊಳ್ಳುವುದು

(4) ಸರಿಯಾದ ಸಮಯದಲ್ಲಿ ಪಠ್ಯವಸ್ತುವನ್ನು ಪೂರ್ಣಗೊಳಿಸುವುದು.

150. **ಹೇಳಿಕೆ – 1 :** ಪರಿಸರ ಅಧ್ಯಯನ ವಿಷಯದಲ್ಲಿ ಮೌಲ್ಯಗಳು ಕಲಿಕೆಯ ಆಂತರಿಕ ಘಟಕವಾಗಿವೆ.

**ಹೇಳಿಕೆ – 2 :** ಪರಿಸರ ಅಧ್ಯಯನ ವಿಷಯದ ಕಲಿಕೆಯು ಮಗುವಿನ ಜ್ಞಾನಾತ್ಮಕ ವಲಯದ ಮೇಲೆ ಹೆಚ್ಚು ಕೇಂದ್ರೀಕರಿಸುತ್ತದೆ.

(1) ಹೇಳಿಕೆ 1, ಹೇಳಿಕೆ 2 ನ್ನು ಬೆಂಬಲಿಸುತ್ತದೆ.

(2) ಹೇಳಿಕೆ 2, ಹೇಳಿಕೆ 1 ನ್ನು ಬೆಂಬಲಿಸುತ್ತದೆ.

(3) ಎರಡೂ ಹೇಳಿಕೆಗಳು ಸ್ವತಂತ್ರವಾಗಿದ್ದು, ಒಂದು ಹೇಳಿಕೆ ಮತ್ತೊಂದು ಹೇಳಿಕೆಯನ್ನು ಬೆಂಬಲಿಸುವುದಿಲ್ಲ.

(4) ಎರಡೂ ಹೇಳಿಕೆಗಳು ಪರಸ್ಪರ ವೈರುಧ್ಯತೆಯಿಂದ ಕೂಡಿವೆ.

Scanned with OKEN Scanner